I/509694/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: DPUE-EST30PRG(NC)/1/2023-PLCY-E-1221431. ದಿನಾಂಕ: 09-11-2023

**ಸುತ್ತೋಲೆ**

ವಿಷಯ : 2024-25ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಚಿಸುವ ಅರ್ಹ ಶಿಕ್ಷಣ ಸಂಸ್ಥೆ/ಟ್ರಸ್ಟ್‌ಗಳಿಂದ ಪ್ರಸ್ತುತ ಚಾಲ್ತಿಯಾಲ್ಲಿರುವ ನಿಯಮಗಳನ್ವಯ ಆನ್-ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ:

1. ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು ಇಡಿ 136 ಟಿಪಿಯು 1999 ದಿನಾಂಕ:09-10-2006.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ: 27-09-2018.
4. ಸರ್ಕಾರದ ಆದೇಶದ ಸಂಖ್ಯೆ: ಇಡಿ 331 ಎಸ್‌ಹೆಚ್‌ಹೆಚ್ 2018 ದಿನಾಂಕ 11-09-2018.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್‌ಹೆಚ್‌ಹೆಚ್ 2019 ದಿನಾಂಕ: 08-03-2019.
6. ಸರ್ಕಾರದ ಪತ್ರ ಸಂಖ್ಯೆ: ಇಪಿ 46 ಎಸ್‌ಹೆಚ್‌ಹೆಚ್ 2020 ದಿನಾಂಕ 17-03-2020.
7. ಸರ್ಕಾರದ ಪತ್ರ ಸಂಖ್ಯೆ: ಇಪಿ 90 ಡಿಜಿಡಿ 2019 ದಿನಾಂಕ 23-04-2020.
8. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇವರ ಪತ್ರ ಸಂಖ್ಯೆ: ಜಿಬಿಸಿ(1)502/2004 ದಿನಾಂಕ 08-07-2020.
9. ಸರ್ಕಾರದ ಸುತ್ತೋಲೆ : ಇಡಿ 43 ಪಿಜಿಸಿ 2022 ದಿನಾಂಕ: 18-05-2022.
10. ಸರ್ಕಾರದ ಪತ್ರ ಸಂಖ್ಯೆ: ಇಪಿ 76 ಪಿಜಿಸಿ 2022 ದಿನಾಂಕ: 24-02-2022 ಮತ್ತು14-10-2022.
11. ಸರ್ಕಾರದ ಪತ್ರ ಸಂಖ್ಯೆ: ಇಪಿ 226 ಎಸ್‌ಹೆಚ್‌ಹೆಚ್ 2022 ದಿನಾಂಕ:22-11-2022.

-*-*-

1. ಶಿಕ್ಷಣ ಸಂಸ್ಥೆ/ಟ್ರಸ್ಟ್ 2022-23 ಮತ್ತು 2023-24ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು Form-I ರಲ್ಲಿ ಆನ್‌ಲೈನ್ ಮೂಲಕ ಈಗಾಗಲೇ ಸಲ್ಲಿಸಿರುವ ಅರ್ಜಿಯನ್ನು ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(1) ರನ್ವಯ ಈ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಲಾಗಿದೆ.

ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರನ್ವಯ Letter of intentನ್ನು ಸಹ ನೀಡಲಾಗಿದೆ.

ಉದ್ದೇಶಿತ ಕಾಲೇಜು ಕಟ್ಟಡದಲ್ಲಿ ಮೂಲಭೂತ ಸೌಕರ್ಯಗಳನ್ನು ಹಾಗೂ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳದಿರುವ ಮತ್ತು ಅಗತ್ಯ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಆಕ್ಷೇಪಿಸಿ ಸಂಬಂಧಿಸಿದ ಶಿಕ್ಷಣ ಸಂಸ್ಥೆ/ಟ್ರಸ್ಟ್‌ಗಳಿಂದ ಹಿಂಬರಹ ನೀಡಲಾಗಿದೆ.

ಮೂರು (03) ವರ್ಷಗಳ ಕಾಲಾವಕಾಶ ಪಡೆದಿರುವ ಶಿಕ್ಷಣ ಸಂಸ್ಥೆ/ಟ್ರಸ್ಟ್‌ಗಳಿಗೆ 2024-25ನೇ ಸಾಲಿಗೆ ನಿಯಮಾನುಸಾರ ಕಾಲೇಜು ಕಟ್ಟಡದಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಹಾಗೂ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡು ಮತ್ತು ಈ ಹಿಂದೆ ಆಕ್ಷೇಪಿಸಿದ ಅಗತ್ಯ ದಾಖಲೆಗಳೊಂದಿಗೆ ಹೊಸದಾಗಿ ಕಾಲೇಜು ಪ್ರಾರಂಭಿಸಲು ಕೊನೆಯ ಅವಕಾಶವಾಗಿರುತ್ತದೆ.

ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅಗತ್ಯ ಪ್ರಸ್ತಾವನೆ ಸಲ್ಲಿಸಿ, ತಪಾಸಣ ಸಮಿತಿ/Expert body ವರದಿಯೊಂದಿಗೆ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸಲು ತಿಳಿಸಿದೆ.

ಉಲ್ಲೇಖ 06 ರಿಂದ 10ರಲ್ಲಿ ಸರ್ಕಾರವು ಕಟ್ಟಡ ನಿವೇಶನಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳು ಮತ್ತು ಜಾಗದ ಭೂ ಪರಿವರ್ತನೆ ಸಂಬಂಧ ನೀಡಿರುವ ನಿರ್ದೇಶನಗಳನ್ವಯ ಕ್ರಮವಹಿಸುವುದು.

2022-23 ಮತ್ತು 2023-24ನೇ ಸಾಲಿನ ಹೊಸ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪ್ರಸ್ತಾವನೆಗಳನ್ನು ಇ-ಆಫೀಸ್‌ನಲ್ಲಿ ಚಾಲನೆ ಮಾಡಿದೆ. ನಿರ್ದೇಶನಾಲಯದಿಂದ ಸದರಿ ಕಾಲೇಜುಗಳ ಮಂಜೂರಾತಿಗೆ ಸಂಬಂಧಿಸಿದಂತೆ, ಆಕ್ಷೇಪಣೆ/ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಯ ಹಂತದಿಂದಲೇ ಇ-ಆಫೀಸ್‌ನಲ್ಲಿ ಕಡ್ಡಾಯವಾಗಿ ಕಡತ ಚಾಲನೆ ಮಾಡುವುದು.

2. 2024-25ನೇ ಶೈಕ್ಷಣಿಕ ಸಾಲಿಗೆ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ಪ್ರಕ್ರಿಯೆಯನ್ನು ಉಲ್ಲೇಖ-05ರ ಸರ್ಕಾರದ ಪತ್ರದನ್ವಯ ಕ್ರಮಕೈಗೊಳ್ಳಲಾಗುವುದು. ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4 ರನ್ವಯ 2024-25ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆ/ಟ್ರಸ್ಟ್‌ಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಹ ಶಿಕ್ಷಣ ಸಂಸ್ಥೆ/ಟ್ರಸ್ಟ್‌ಗಳು ಇಲಾಖೆಯ ವೆಬ್‌ಸೈಟ್ **"https://pue.karnataka.gov.in/"** ಇಲ್ಲಿ ನಿಗದಿತ ಲಿಂಕ್ **https://dpue-pragathi.karnataka.gov.in/newcollege2024** ಇಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು "ನಿಗದಿತ ನಮೂನೆ" (Form-I)ರಲ್ಲಿ ಸಂಸ್ಥೆ / ಟ್ರಸ್ಟ್ ಗಳು ಅರ್ಜಿಯನ್ನು ನೋಂದಾಯಿಸಿಕೊಳ್ಳತಕ್ಕದ್ದು

***ನಿಗದಿತ ಕಾಲಾವಕಾಶದೊಳಗೆ ಆನ್‌ಲೈನ್ ಮೂಲಕ ಸಲ್ಲಿಸಲ್ಪಡುವ ಅರ್ಜಿಗಳನ್ನು ಮಾತ್ರ ನಿಯಮಾನುಸಾರ ಪರಿಶೀಲಿಸಲಾಗುವುದು. ಮುದ್ದಾಂ ಅಥವಾ ನೇರವಾಗಿ ಸಲ್ಲಿಸಲ್ಪಡುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.***

3. **ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸುವ ಪೋರ್ಟಲ್ ಇನ್ನು ಮುಂದೆ ಆಯಾ ಶೈಕ್ಷಣಿಕ ವರ್ಷಕ್ಕೆ ಅವಧಿ ಪೂರ್ಣಗೊಳ್ಳುವ/ವರ್ಷದ ಎಲ್ಲಾ ದಿನಗಳು ಸಹಾ ನಿರಂತರವಾಗಿ ತೆರೆದಿರುತ್ತದೆ.**
4. **ದಿನಾಂಕ: 28-02-2024ರೊಳಗೆ ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಇದಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಮಂಜೂರಾತಿಯನ್ನು ನೀಡಲಾಗುವುದು. ಮಂಜೂರಾತಿಯನ್ನು ಪಡೆಯದ ಅರ್ಜಿಗಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಸಲ್ಲಿಸಿರುವ ಅರ್ಜಿಯು ಮೂರು (03) ವರ್ಷಗಳಿಗೆ ಮಾತ್ರ ತನ್ನ ಸಿಂಧುತ್ವ/ಅರ್ಹತೆ ಪಡೆದಿರುತ್ತದೆ.**
5. ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ, 2024-25ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಶಿಕ್ಷಣ ಸಂಸ್ಥೆ/ಟ್ರಸ್ಟ್‌ಗಳು ಮುಂದಿನ ಮೂರು(03) ವರ್ಷಗಳಲ್ಲಿ ಈ ಕೆಳಕಂಡ

ಕ್ರಮಗಳನ್ನು ಅನುಸರಿಸುವುದು:

(ಅ) ಶಿಕ್ಷಣ ಸಂಸ್ಥೆ/ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2)(a) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ:08-03-2018 ರಂತೆ ಈ ಕೆಳಗಿನ ವಿಸ್ತೀರ್ಣದ ನಿವೇಶನವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

| SL No | Location | Extent of land |
|---|---|---|
| I. | Educational institution imparting pre- primary to higher secondary education, or primary to higher secondary education, or pre-primary to secondary education | |
| 1 | BBMP and other Municipal corporation areas | 2000 Sq meter |
| 2 | Other areas | 4000 Sq meter |
| II. | Educational institution imparting only either primary and secondary education, or imparting secondary and higher secondary education | |
| 3 | BBMP and other Municipal corporation areas | 1500 Sq meter |
| 4 | Other areas | 3000 Sq meter |
| III. | Educational Institution imparting only Primary education or Secondary Education, or Higher Secondary Education | |
| 5 | BBMP and other Municipal corporation areas | 1000 Sq meter |
| 6 | Other areas | 2000 Sq meter |

(ಆ) ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ನಿವೇಶನವು ಸ್ವಂತ ನಿವೇಶನವಾಗಿರಬೇಕು ಅಥವಾ 30 ವರ್ಷಕ್ಕೆ ಭೋಗ್ಯಕ್ಕೆ ಪಡೆದಿರಬೇಕು.

• ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೇ ಭೋಗ್ಯಕ್ಕೆ ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು ಕನಿಷ್ಟ 30 ವರ್ಷಗಳ ಅವಧಿಗೆ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು ಹಾಗೂ ಉಲ್ಲೇಖ 11ರನ್ವಯ ಸದರಿ ಕರಾರು ಚಾಲ್ತಿಯಲ್ಲಿರತಕ್ಕದ್ದು.

• ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಲೇಬೇಕು.

• ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ/ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು. ಪ್ರಸ್ತುತ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ, ಸಂಸ್ಥೆ/ಟ್ರಸ್ಟ್‌ನ್ನು ಆಡಳಿತ ಮಂಡಳಿಯ ಹೆಸರಿನಲ್ಲಿರಬೇಕು. (ಸಂಸ್ಥೆಯ ಪದಾಧಿಕಾರಿ ಹೆಸರಲ್ಲಿರಬೇಕು)

(ಇ) ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮ 4(2) ಮತ್ತು 4(3) ರಂತೆ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶಕ್ಕಾಗಿಯೇ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪದವಿ ಪೂರ್ವ ಕಾಲೇಜಿಗಾಗಿಯೇ ಸೂಕ್ತ ಕಟ್ಟಡವನ್ನು ನಿರ್ಮಿಸುವುದು ಮತ್ತು ಸದರಿ ನಿಯಮಗಳಂತೆ ಸದರಿ ನಿವೇಶನ / ಕಟ್ಟಡದಲ್ಲಿ ಅಗತ್ಯ ಎಲ್ಲಾ

ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಂಡಿರಬೇಕು.

(ಈ) ಒಂದು ವೇಳೆ 2024-25ನೇ ಶೈಕ್ಷಣಿಕ ಸಾಲಿನಿಂದಲೇ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ ನಿವೇಶನ ಮತ್ತು ಕಟ್ಟಡವನ್ನು ಹೊಂದಿ, ಅದರಲ್ಲಿ ಬೋಧಿಸಲು ಅಪೇಕ್ಷಿಸುವ ಸಂಯೋಜನೆಗಳು ಮತ್ತು ವಿಭಾಗಗಳಿಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ನಿಯಮ 4(4) ರಂತೆ ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿಯವರು ಇದರೊಂದಿಗೆ ಲಗತ್ತಿಸಿರುವ Form-III ರಲ್ಲಿ ಮಾಹಿತಿಯನ್ನು ರೂ100/-ರ ಇ-ಸ್ಟಾಂಪ್‌ನಲ್ಲಿ ನೋಟರಿ ದೃಢೀಕೃತ ಪ್ರಮಾಣ ಪತ್ರದೊಂದಿಗೆ ಛಾಪಾಕಾಗದದಲ್ಲಿ ನಮೂದಿಸಿ, ಸದರಿ ಛಾಪಾಕಾಗದವನ್ನು ಆನ್-ಲೈನ್ ಅರ್ಜಿಯಲ್ಲಿ ಅಪ್-ಲೋಡ್ ಮಾಡುವುದು.

(ಉ) ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ ದಿನಾಂಕವೇ Letter of intent ಜಾರಿ ಮಾಡಿದ ದಿನಾಂಕವಾಗಿರುತ್ತದೆ. ಯಾವುದೇ ಕಾರಣಕ್ಕೂ ಪ್ರತ್ಯೇಕವಾಗಿ Letter of intentನ್ನು ಸಂಸ್ಥೆ/ಟ್ರಸ್ಟ್‌ಳಿಗೆ ನಿರ್ದೇಶನಾಲಯದಿಂದ ಜಾರಿ ಮಾಡುವುದಿಲ್ಲ.

Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ದತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವ Letter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು ಹಾಗೂ ಅರ್ಜಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

Letter of intent ಮೂರು ವರ್ಷಗಳ ನಂತರ ಸಿಂಧುತ್ವ / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷದೊಳಗೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ.

6. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು,

i. ಸಂಸ್ಥೆ/ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.

ii. ಸಂಸ್ಥೆ/ಟ್ರಸ್ಟ್ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು.

iii. ಸಂಸ್ಥೆ/ಟ್ರಸ್ಟ್ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ಇರಬಾರದು.

iv. ಸಂಸ್ಥೆ/ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು (Present Term Renewal)(PTR) ಹೊಂದಿರಬೇಕು.

v. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.

vi. ಸಂಸ್ಥೆ/ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ ರೂ.28.80 ಲಕ್ಷಗಳ ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.

vii. ಸಂಸ್ಥೆ/ಟ್ರಸ್ಟ್ ಗಳ ಆಡಿಟ್‌ನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.

viii. ಸದರಿ ಸಂಸ್ಥೆ/ಟ್ರಸ್ಟ್ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರಂತೆ ವಿಸ್ತೀರ್ಣದ ನಿವೇಶನವನ್ನು ಹೊಂದಿರತಕ್ಕದ್ದು. ನಿವೇಶನ ಸಂಸ್ಥೆ/ಟ್ರಸ್ಟ್ ಆಡಳಿತ ಮಂಡಳಿಯ

ಅಧ್ಯಕ್ಷರು/ಚೇರ್‌ಮನ್/ಕಾರ್ಯದರ್ಶಿಯವರ ಪದನಾಮದಲ್ಲಿ ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ವೈಯಕ್ತಿಕ ಹೆಸರಿನಲ್ಲಿ ಇರಬಾರದು.

ix. ನಿವೇಶನ/ಕಟ್ಟಡವನ್ನು ನೋಟರಿಯವರ ಸಮ್ಮುಖದಲ್ಲಿ ಪ್ರಮಾಣ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ/ ಕಟ್ಟಡವನ್ನು ಸಂಸ್ಥೆ/ಟ್ರಸ್ಟ್ ಸ್ವಾಧೀನಾನುಭವದಲ್ಲಿರುವ ನಿವೇಶನ/ ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ. ಕರಾರು/ಒಡಂಬಡಿಕೆಯನ್ನು ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಿರತಕ್ಕದ್ದು.

x. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ/ಕಟ್ಟಡದಲ್ಲಿ ನಿಯಮ 04 ರನ್ವಯ ಮೂಲಭೂತ ಸೌಲಭ್ಯಗಳಿರಬೇಕು.

7. 2024-25ನೇ ಸಾಲಿನಲ್ಲಿಯೇ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ಹಾಗೂ ಅನುಬಂಧದ ಮಾಹಿತಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸದಿದ್ದಲ್ಲಿ, ತಪಾಸಣಾ ಸಮಿತಿಗೆ ಸ್ಥಳ ಪರಿಶೀಲನೆ ನಡೆಸುವ ಕುರಿತು ಸೂಚನೆ ನೀಡದೆ, ಈ ಹಂತದಲ್ಲಿಯೇ 2024-25ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

8. ಕಾಲೇಜಿನ ನಿವೇಶನ, ಕಟ್ಟಡ ಮತ್ತು ಇರಬೇಕಾದ ಮೂಲಭೂತ ಸೌಲಭ್ಯಗಳ ಕುರಿತು ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಸ್ಥಳ ಪರಿಶೀಲನೆ ಮತ್ತು ತಪಾಸಣೆ ನಡೆಸಿ ವರದಿ ನೀಡುವ ಸಂಬಂಧ ಸಿದ್ಧಪಡಿಸಿರುವ ನಮೂನೆಯಲ್ಲಿ ವಿವರಿಸಲಾಗಿದೆ.

9. ಸರ್ಕಾರದ ಆದೇಶ ಸಂಖ್ಯೆ: ಇಡಿ 195 ಡಿಜಿಡಿ 2017 ದಿನಾಂಕ: 20-03-2018ರನ್ವಯ ಅರ್ಜಿಯೊಂದಿಗೆ ಅರ್ಜಿ ಶುಲ್ಕ ರೂ.50,000/-(ರೂಪಾಯಿ ಐವತ್ತು ಸಾವಿರಗಳು ಮಾತ್ರ) ಪಾವತಿಸಿರುವ ಮೂಲ ಚಲನ್‌ನ್ನು ಸಂಸ್ಥೆ/ಟ್ರಸ್ಟ್‌ನ ಪ್ರಸ್ತಾವನೆಯೊಂದಿಗೆ ಸಲ್ಲಿಸತಕ್ಕದ್ದು. ಪಾವತಿಸಿರುವ ಅರ್ಜಿ ಶುಲ್ಕವು ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ 03 ವರ್ಷಗಳಿಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಸದರಿ ಯಾವುದೇ ಕಾರಣಕ್ಕೂ ಮರುಪಾವತಿ(Refund) ಮಾಡಲು ಅವಕಾಶವಿರುವುದಿಲ್ಲ.

10. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಆಯಾ ಜಿಲ್ಲೆಯಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳು ನಿಯಮಗಳನ್ವಯ ಅರ್ಹತೆ ಹೊಂದಿರುವ ಕುರಿತು ಪರಿಶೀಲಿಸಿ ವರದಿ ನೀಡಲು, ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 2(7) ರಲ್ಲಿ ಸೂಚಿಸಿರುವಂತೆ ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಕೂಡಲೇ ತಪಾಸಣಾ ಸಮಿತಿ/Expert Body) ರಚಿಸಿಕೊಳ್ಳತಕ್ಕದ್ದು ಮತ್ತು ಸದರಿ ಸಮಿತಿಗೆ ನಿರ್ದೇಶನಾಲಯದ ಅನುಮೋದನೆ ಪಡೆಯುವುದು.

11. ಸರ್ಕಾರದ ಆದೇಶ ಸಂಖ್ಯೆ: ಇಡಿ 331 ಎಸ್‌ಹೆಚ್‌ಹೆಚ್ 2018 ದಿನಾಂಕ 11-09-2018 ರಲ್ಲಿ ಸರ್ಕಾರವು ಸೂಚಿಸಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದುವುದು ಕಡ್ಡಾಯವಾಗಿರುತ್ತದೆ.

12. ಉಲ್ಲೇಖ-7ರ ಸರ್ಕಾರದ ನಿರ್ದೇಶದನ್ವಯ ಉಲ್ಲೇಖ 09ರಲ್ಲಿ ಸೂಚಿಸಿರುವಂತೆ National Building Code ಮಾನದಂಡಗಳನ್ವಯ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರುಗಳನ್ನು ಸಂಪರ್ಕಿಸಿ ಕಟ್ಟಡ ಸುರಕ್ಷತೆ ಸಂಬಂಧ Structural Stability ಪ್ರಮಾಣ ಪತ್ರ /ಕ್ಲಿಯರೆನ್ಸ್ ಸರ್ಟಿಫಿಕೆಟ್‌ಗಳನ್ನು ಪಡೆಯುವುದು.

13. ಉಲ್ಲೇಖ-8ರ ಪತ್ರದನ್ವಯ ಉಲ್ಲೇಖ-9ರ ಸುತ್ತೋಲೆಯಲ್ಲಿ ನೀಡಿರುವ ಸೂಚನೆಯಂತೆ ಶೈಕ್ಷಣಿಕ ಕಟ್ಟಡಗಳಿಗೆ ನೀಡಲಾಗಿರುವ ಸಲಹಾ ಪತ್ರದಲ್ಲಿ (Advisory Certificate) ಸೂಚಿಸಲಾಗಿರುವ ಅಗ್ನಿ ನಿವಾರಣೆ ಮತ್ತು ಅಗ್ನಿಶಮನ ಮುನ್ನೆಚ್ಚರಿಕೆ ಕ್ರಮಗಳನ್ನು ಕಾರ್ಯನುಷ್ಠಾನಗೊಳಿಸದೇ ಇದ್ದಲ್ಲಿ ಕೂಡಲೇ ಕಾರ್ಯನುಷ್ಠಾನಗೊಳಿಸಿ ನಿಗದಿತ ಸಮಯದೊಳಗೆ ಅಗ್ನಿಶಾಮಕ ಇಲಾಖೆಯ **ಸಮಾಪನಾ ಪತ್ರವನ್ನು (Compliance Certificate)** ಪಡೆಯತಕ್ಕದ್ದು.

14. ಉಲ್ಲೇಖ 10ರಲ್ಲಿ ಸರ್ಕಾರವು ಜಾಗದ ಭೂ ಪರಿವರ್ತನೆ ಸಂಬಂಧ ನೀಡಿರುವ ನಿರ್ದೇಶನಗಳನ್ವಯ ಕ್ರಮವಹಿಸುವುದು.

15. 2024-25ನೇ ಸಾಲಿಗೆ ಹೊಸ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ **ವೇಳಾ ಪಟ್ಟಿಯನ್ನು** ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

16. ನಿರ್ದೇಶನಾಲಯವು ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರಾತಿ ಆದೇಶ ಹೊರಡಿಸಿದ ನಂತರ ಸದರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ಮಂಜೂರು ಮಾಡುವ ಸಂಬಂಧ ಆಯಾ ಜಿಲ್ಲಾ ಉಪನಿರ್ದೇಶಕರುಗಳು ವೇಳಪಟ್ಟಿಯಲ್ಲಿ ನಿಗದಿಪಡಿಸಿರುವ ಸಮಯದೊಳಗೆ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಪ್ರಥಮ ಶೈಕ್ಷಣಿಕ ಮಾನ್ಯತೆಯನ್ನು ನೀಡಲು ಯೋಗ್ಯ ಮತ್ತು ಅರ್ಹ ಪ್ರಸ್ತಾವನೆ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ಸ್ಪಷ್ಟ ಅಭಿಪ್ರಾಯ / ಶಿಫಾರಸ್ಸಿನೊಂದಿಗೆ ಜಿಲ್ಲಾ ಉಪನಿರ್ದೇಶಕರು ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು

17. ಅರ್ಜಿ ಸಲ್ಲಿಸುವುದರಿಂದ ಮೊದಲ್ಗೊಂಡು ಎಲ್ಲಾ ಪ್ರಕ್ರಿಯೆಗಳನ್ನು ಕಳೆದ ಸಾಲಿನಂತೆ ಆನ್‌ಲೈನ್ ಮುಖಾಂತರವೇ ನಡೆಸಲಾಗುವುದು. ಈ ಸಂಬಂಧ ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕುರಿತು ವಿವರವಾದ ಮಾರ್ಗಸೂಚಿಯನ್ನು ಇಲಾಖೆಯ ವೆಬ್‌ಸೈಟ್ **"https://pue.karnataka.gov.in/"** ಇಲ್ಲಿ ನಿಗದಿತ ಲಿಂಕ್ https://dpue-pragathi.karnataka.gov.in/newcollege2024 ರಿಂದ ಪಡೆಯಬಹುದು.

18. ಆನ್-ಲೈನ್ ಅರ್ಜಿ ಸಲ್ಲಿಸುವ ಸಮಯದಲ್ಲಿ ತಾಂತ್ರಿಕ ಸಮಸ್ಯೆ ಉಂಟಾದ್ದಲ್ಲಿ ದೂರವಾಣಿ ಸಂಖ್ಯೆ 080-23083867 ಹಾಗೂ ದಾಖಲೆಗಳ ಸ್ಪಷ್ಟೀಕರಣಕ್ಕೆ ಸಂಬಂಧಿಸಿದಂತೆ ದೂರವಾಣಿ ಸಂಖ್ಯೆ 080-23083816ಕ್ಕೆ ಕಾರ್ಯನಿರತ ಅವಧಿಯಲ್ಲಿ ಸಂರ್ಪಕಿಸಲು ತಿಳಿಸಿದೆ ಮತ್ತು ಇ-ಮೇಲ್ ವಿಳಾಸ: puenc2425@gmail.comಗೆ ಇ-ಮೇಲ್ ಸಹಾ ಕಳುಹಿಸಬಹುದು.

Signed by
Sindhu B Rupesh
Date: 09-11-2023 12:59:32

ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)

**ಗೆ,**

ರಾಜ್ಯದ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳ ಮುಂದಿನ ಅಗತ್ಯ ಕ್ರಮಕ್ಕಾಗಿ.

**ಪ್ರತಿ ಮಾಹಿತಿಗಾಗಿ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560001 –ರವರಿಗೆ ಮಾಹಿತಿಗಾಗಿ ವಂದನಾಪೂರ್ವಕವಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು (ಮಾ&ಅ), ಉಪನಿರ್ದೇಶಕರು (ಮಾ&ಅ), ಸಹಾಯಕ ನಿರ್ದೇಶಕರು(ಮಾ&ಅ), ಮಾ&ಅ ಎಲ್ಲಾ ಶಾಖಾಧಿಕಾರಿಗಳು / ಅಧೀಕ್ಷಕರು ಮತ್ತು ಸಂಬಂಧಿಸಿದ ವಿಷಯ ನಿರ್ವಾಹಕರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಶಾಶಿಇ(ಪಪೂ) ಇವರಿಗೆ ಸುತ್ತೋಲೆಯನ್ನು ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.
4. ಕಛೇರಿ / ಹೆಚ್ಚುವರಿ.